ಬರದೇನೇ ಏನೇ ಚರ್ಚೆಗಳು ನಡೆದರೂ ಕೂಡ ಏನೇ ಇಲ್ಲಿ ಪ್ರೊಸೀಡಿಂಗ್ಸ್ ಆದರೂ ಕೂಡ, ತೀರ್ಮಾನಗಳಾದರೂ ಕೂಡ ಅವು ಲೀಗಲ್ ಆಗುವುದಿಲ್ಲ ಎಂಬುದು ನನ್ನ ಸ್ಪಷ್ಟ ಅಭಿಪ್ರಾಯ. ಇದನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಇದನ್ನು ದಯಮಾಡಿ ಕನ್ಸಿಡರ್ ಮಾಡಬೇಕಾಗಿ ನಿಮ್ಮಲ್ಲಿ ನನ್ನ ಮನವಿ.

(ಗೊಂದಲ)

6. ಪ್ರಕಟಣೆ

ವಿಷಯ : ಶ್ರೀ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಜನತಾದಳದ ಶಾಸಕಾಂಗ ಪಕ್ಷದ ನಾಯಕರನ್ನಾಗಿ ಘೋಷಣೆ ಮಾಡುವ ಬಗ್ಗೆ.

ಅಧ್ಯಕ್ಷರು : ಈಗ ೪೧ ಜನ ಸದಸ್ಯರು ನಿರ್ಣಯವನ್ನು ಮಾಡಿ ಏನು ಪತ್ರವನ್ನು ನನಗೆ ಕೊಟ್ಟಿದ್ದೀರೋ ಅವರ ಸಹಿಗಳನ್ನೆಲ್ಲಾ ವೆರಿಫೈ ಮಾಡಲಾಗಿದೆ. ನಾನು ಬಹಳ ಜನ ಕಾನೂನು ಪಂಡಿತರ ಜೊತೆ ಮಾತನಾಡಿದ್ದೇನೆ. ಹಾಗಾಗಿ ಏನೊಂದು 41 ಜನ ಸದಸ್ಯರ ಸಹಿ ಇರುವ ಪಟ್ಟಿ ನನಗೆ ಬಂದಿತ್ತು ಅದು ಬಿಟ್ಟು ಬೇರೆ ಯಾರಿಂದಲೂ ನನಗೆ ಬಂದಿಲ್ಲ. ಆ ಕಾರಣದಿಂದ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರನ್ನು ಜನತಾದಳ ಶಾಸಕಾಂಗದ ಪಕ್ಷದ ನಾಯಕರನ್ನಾಗಿ ಘೋಷಣೆ ಮಾಡಲಾಗಿದೆ.

(ಗೊಂದಲ)

(ಈ ಹಂತದಲ್ಲಿ ಎಲ್ಲಾ ಮಾನ್ಯ ಸದಸ್ಯರು ಎದ್ದು ನಿಂತು ಮಾತನಾಡುತ್ತಿದ್ದರು)

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಎಲ್ಲಾ ಸದಸ್ಯರು, ಕನ್ನಡ ವಾಟಾಳ್ ಪಕ್ಷದ ಶ್ರೀ ವಾಟಾಳ್ ನಾಗರಾಜ್ ಹಾಗೂ ಸಿ.ಪಿ.ಎಂ.ನ ಶ್ರೀ ಜಿ.ವಿ. ಶ್ರೀರಾಮರೆಡ್ಡಿ ಅವರು, ರಿಪಬ್ಲಿಕನ್ ಪಕ್ಷದ ಶ್ರೀ ಎಸ್. ರಾಜೇಂದ್ರನ್ ಅವರು ಧಿಕ್ಕಾರ ಧಿಕ್ಕಾರ ಎಂದು ಘೋಷಣೆ ಕೂಗುತ್ತಾ ಬಾವಿಗೆ ಬಂದರು)

(ಗೊಂದಲ)

7.ವಿಶ್ವಾಸಮತ ನಿರ್ಣಯವನ್ನು ಮಂಡಿಸುವಂತೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಸೂಚನೆ.

ಅಧ್ಯಕ್ಷರು : ನಾನು ಈಗ ಮಾನ್ಯ ಮುಖ್ಯಮಂತ್ರಿಯವರನ್ನು ವಿಶ್ವಾಸ ಮತ ನಿರ್ಣಯವನ್ನು ಮಂಡಿಸಲು ಕೋರುತ್ತೇನೆ.

(ಗೊಂದಲ)

ಅಧ್ಯಕ್ಷರು : ಈಗ ಸದನವನ್ನು ಅರ್ಧ ಗಂಟೆ ಕಾಲ ಮುಂದೂಡುತ್ತಿದ್ದೇನೆ.

(ಗೊಂದಲ)

(ಸದನವು ಪಿ.ಳಿಪಿ ಕ್ಕೆ ಮುಂದೂಡಲ್ಪಟ್ಟು ಅರ್ಧ ಗಂಟೆ ನಂತರ ಸಮಾವೇಶಗೊಳ್ಳಲು ನಿರ್ಧರಿಸಿತು.)

(ಸದನವು ಮತ್ತೆ ಸಂಜೆ 6.40ಕ್ಕೆ ಪುನ: ಸಮಾವೇಶಗೊಂಡಿತು)

ಸನ್ಮಾನ್ಯ ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

(ಕಾಂಗ್ರೆಸ್ ಸದಸ್ಯರುಗಳು ಬಾವಿಯಿಂದ ಧಿಕ್ಕಾರ, ಧಿಕ್ಕಾರ ಎಂದು ಘೋಷಣೆಗಳನ್ನು ಕೂಗುತ್ತಿದ್ದರು)

ಅಧ್ಯಕ್ಷರು : ಮಾನ್ಯ ಸಭಾನಾಯಕರು, ಮುಖ್ಯಮಂತ್ರಿಗಳು ವಿಶ್ವಾಸಮತ ಕೇಳುವುದಕ್ಕೆ ಅವಕಾಶ ಮಾಡಿಕೊಡಬೇಕು. ತಾವು ಇದನ್ನು ಅರ್ಥ ಮಾಡಿಕೊಳ್ಳಿ ....

(ಕಾಂಗ್ರೆಸ್ ಮಾನ್ಯ ಸದಸ್ಯರುಗಳು we want Justice ಎಂಬ ಘೋಷಣೆಗಳನ್ನು ಬಾವಿಯಿಂದ ಕೂಗುತ್ತಿದ್ದರು)

(ಗೊಂದಲ)

ಅಧ್ಯಕ್ಷರು : ಈಗ ಸದನವನ್ನು ಹತ್ತು ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ. (ಸದನವು 6.42 ಕ್ಕೆ ಮುಂದೂಡಲ್ಪಟ್ಟು ಹತ್ತು ನಿಮಿಷಗಳ ನಂತರ ಸಮಾವೇಶಗೊಳ್ಳಲು ನಿರ್ಧರಿಸಿತು).

(ಸದನವು ಪುನಃ ರಾತ್ರಿ 7 ಗಂಟೆ 8 ನಿಮಿಷಕ್ಕೆ ಸಮಾವೇಶಗೊಂಡಿತು)

(ಮಾನ್ಯ ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

(ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದು, ಘೋಷಣೆಗಳನ್ನು ಕೂಗುತ್ತಿದ್ದರು)

ಅಧ್ಯಕ್ಷರು : ದಯಮಾಡಿ ಸಹಕರಿಸಿ. ಎಲ್ಲರೂ ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ. ಇದೆಲ್ಲಾ ಸ್ವಾಭಾವಿಕ. ದಯಮಾಡಿ ಸಹಕರಿಸಿ.

(ಗೊಂದಲ)

ಅಧ್ಯಕ್ಷರು : ಇವತ್ತು ಮಾನ್ಯ ಮುಖ್ಯಮಂತ್ರಿಗಳು ವಿಶ್ವಾಸ ಮತವನ್ನು ಯಾಚನೆ ಮಾಡಲೇಬೇಕು. ಮಾನ್ಯ ರಾಜ್ಯಪಾಲರ ಸೂಚನೆ ಇದೆ. ದಯಮಾಡಿ ಎಲ್ಲರೂ ಅರ್ಥಮಾಡಿಕೊಳ್ಳಬೇಕು.

(ಗೊಂದಲ)

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೆ, ಈ ತರಹದ ಘಟನೆ ನಡೆಯುತ್ತಿದೆ. ಎರಡು ಸಲ adjourn ಆಗಿ ಮತ್ತೊಂದು ಸಲ ನಾವು ಇಲ್ಲಿ ಕುಳಿತಿದ್ದೇವೆ. ತಾವು ಇಲ್ಲಿಯವರೆಗೆ ಬಹಳ ಚೆನ್ನಾಗಿ ಸದನವನ್ನು ನಡೆಸಿದ್ದೀರಿ. ತಮ್ಮ ಬಗ್ಗೆ ಹೆಚ್ಚಿನ ಗೌರವ ಕೂಡ ಇದೆ. ಏಕಾಏಕಿ ಏನಾಗಿದೆ ಎಂದು ನನಗೆ ಗೊತ್ತಾಗುತ್ತಿಲ್ಲ. ಇದು ರಾಜ್ಯದ ವಿಧಾನ ಸಭೆಯ ಇತಿಹಾಸದಲ್ಲಿಯೇ ಈ ತರಹದ ಘಟನೆ ನಡೆದಿಲ್ಲ.

(ಗೊಂದಲ)

ಶ್ರೀ ಧರ್ಮಸಿಂಗ್ : ಯಾವಾಗಲೂ ಕೂಡ ಮಾನ್ಯ ಸಭಾಧ್ಯಕ್ಷರು ಇಂತಹ ಒಂದು ವಾತಾವರಣ .....

(ಗೊಂದಲ)

ಶ್ರೀ ಧರ್ಮಸಿಂಗ್ : ..... ಈ ತರಹದ ವಾತಾವರಣ ನಿರ್ಮಾಣವಾದ ಮೇಲೆ ಯಾವಾಗಲೂ ಕೂಡ ಸಭಾ ನಾಯಕರು, ವಿರೋಧ ಪಕ್ಷದ ನಾಯಕರು, ಉಪ ಮುಖ್ಯಮಂತ್ರಿಗಳು ಮತ್ತು ಇತರ ಎಲ್ಲಾ ಹಿರಿಯರನ್ನೂ ಕೂಡ ಕರೆದು ಮಾತನಾಡತಕ್ಕಂಥ ವ್ಯವಸ್ಥೆ ಇದೆ. ಅದಕ್ಕೇ ಅವರು ಹೇಳುತ್ತಿದ್ದಾರೆ. XXX ಇಂತಹ ಒಂದು ವಾತಾವರಣದಲ್ಲಿ ಎಲ್ಲರನ್ನೂ ಕರೆಸಿ ಮಾತನಾಡತಕ್ಕಂಥ ಸೌಜನ್ಯ ಇಲ್ಲವೆಂದರೆ ನಾವು ಏನು ಹೇಳಬೇಕಾಗಿದೆ? ನಿಮ್ಮಿಂದ ನ್ಯಾಯ ಬೇಕಾಗಿದೆ. ಮಾನ್ಯ ಸಭಾಧ್ಯಕ್ಷರೆ .....

XXX ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

(ಗೊಂದಲ)

ಶ್ರೀ ಧರ್ಮಸಿಂಗ್ : ..... ಯಾವ ಪೀರ್ಪಿನ ಬಗ್ಗೆ, ಯಾವ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ, ಆ ಬಗ್ಗೆ ನಿಮ್ಮಿಂದ ಏನೂ ಸ್ಪಷ್ಟೀಕರಣ ಬರಲಿಲ್ಲವಾಗಿ ಇಂತಹ ಗೊಂದಲದ ವಾತಾವರಣ ನಿರ್ಮಾಣವಾಗಿದೆ. XXX

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ..... ಮಾನ್ಯ ಅಧ್ಯಕ್ಷರೆ, ಮೊದಲು ಅವರು ತಮ್ಮ ಬಹುಮತವನ್ನು ಸಾಬೀತು ಮಾಡಲಿ, ವಿಶ್ವಾಸ ಮತವನ್ನು ಕೇಳಲಿ. ನಂತರ ಬೇಕಾದ್ದು ಮಾಡಲಿ...

(ಗೊಂದಲ)

ಶ್ರೀ ಧರ್ಮಸಿಂಗ್ : ..... ಮಾನ್ಯ ವಿರೋಧ ಪಕ್ಷದ ನಾಯಕರೆ, ಏಕೆ ತುರಾತುರಿ ಮಾಡುತ್ತೀರಿ? ವಿಶ್ವಾಸ ಮತವನ್ನೂ ಕೂಡ ಕೇಳುತ್ತೇವೆ ಮತ್ತು .....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ನಿಮಗೆ ಶೋಭೆ ತರತಕ್ಕದ್ದಲ್ಲ. ಈ ರಾಜ್ಯದ ಯಾವುದೇ ಮುಖ್ಯಮಂತ್ರಿ ಈ ರೀತಿ ಮಾಡಿರಲಿಲ್ಲ. .....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : .... ವಿಶ್ವಾಸ ಮತ ಕೇಳಬೇಕೇ ಹೊರತು ಒಬ್ಬ ಸಭಾಧ್ಯಕ್ಷರ ಬಗ್ಗೆ ಇಂತಹ ಹಗುರವಾದ ರೀತಿಯಲ್ಲಿ ಮಾತನಾಡುವುದು ತಮಗೆ ಶೋಭೆ ತರತಕ್ಕದ್ದಲ್ಲ. ಒಬ್ಬರು ಮುಖ್ಯಮಂತ್ರಿಗಳು ಈ ರೀತಿ ಮಾತನಾಡತಕ್ಕದ್ದು ಶೋಭೆ ತರತಕ್ಕದ್ದಲ್ಲ. .....

(ಗೊಂದಲ)

ಅಧ್ಯಕ್ಷರು : ಅವರು ಈಗ ವಿಶ್ವಾಸ ಮತ ಕೇಳುವುದಕ್ಕೆ ಎದ್ದು ನಿಂತಿದ್ದಾರೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

XXX ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ..... ಸ್ಪೀಕರ್ ಬಗ್ಗೆ ಈ ರೀತಿ ಮಾತನಾಡುವುದು ಶೋಭೆ ತರುವಂಥಾದ್ದಲ್ಲ. ಮೊದಲು ಅವರಿಗೆ ವಿಶ್ವಾಸ ಮತ ಕೇಳಲು ಹೇಳಿ. ಅವರೆಲ್ಲಾ ವೆಲ್‌ನಲ್ಲಿದ್ದಾರೆ. ವಿಶ್ವಾಸ ಮತ ಕೇಳದೆ ಈ ರೀತಿ ಅವರು ಮಾತನಾಡಬಹುದೇ? ಮೊದಲು ಅವರಿಗೆ ವಿಶ್ವಾಸ ಮತ ಕೇಳುವುದಕ್ಕೆ ಹೇಳಿ. ವಿಶ್ವಾಸ ಮತ ಕಳೆದುಕೊಂಡಾಯಿತು, ಬಹುಮತ ಇಲ್ಲವೆಂದು ಸಾಬೀತಾಯಿತು, ಸಭಾಧ್ಯಕ್ಷರ ಬಗ್ಗೆ ಹಗುರವಾಗಿ ಮಾತನಾಡುತ್ತೀರಾ ? ....

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ತಾವು ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳು ವಿಶ್ವಾಸ ಮತ ಕೇಳಲು ಎದ್ದು ನಿಂತಿದ್ದಾರೆ. ಆದ್ದರಿಂದ ದಯಮಾಡಿ ಕುಳಿತುಕೊಳ್ಳಿ, ದಯಮಾಡಿ ಎಲ್ಲರೂ ಸಹಕರಿಸಿ. ನಾವು ಸಭಾ ನಿಯಮದ ಪ್ರಕಾರ ಕೆಲಸ ಮಾಡೋಣ. ಮಾನ್ಯ ಮುಖ್ಯಮಂತ್ರಿಗಳು.

(ಗೊಂದಲ)

ಶ್ರೀ ಧರ್ಮಸಿಂಗ್ : ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ನಾನು ಮನವಿ ಮಾಡಿಕೊಂಡಿದ್ದೇನೆ. ವಾತಾವರಣ ತಿಳಿಯಾಗಲೇಬೇಕು. ಸ್ಪಷ್ಟೀಕರಣ ಕೊಡಲೇಬೇಕು. ಸ್ಪಷ್ಟೀಕರಣದ ಸಲುವಾಗಿ ಈಗಾಗಲೇ

XXXಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ವೆಲ್‌ನಲ್ಲಿ ಎಲ್ಲಾ ಸದಸ್ಯರೂ ಕುಳಿತಿದ್ದಾರೆ. ತಮ್ಮಿಂದ ಏನೂ ಸ್ಪಷ್ಟೀಕರಣ ಬರಲಾರದ ಕಾರಣ ಈ ಗೊಂದಲದ ವಾತಾವರಣ ನಿರ್ಮಾಣವಾಗಿದೆ. ನೀವು ವಿಶ್ವಾಸ ಮತದ ಸಲುವಾಗಿ ನನ್ನನ್ನು ಕೇಳುತ್ತಿದ್ದೀರಿ. The House is not in order. ಇವತ್ತು ರಾಜಕೀಯ ಪರಿಸ್ಥಿತಿ ಏನು ಇಂತಹ ಒಂದು ವಾತಾವರಣದಲ್ಲಿದೆ, ಇಂತಹ ಸಂದರ್ಭದಲ್ಲಿ ವಿಶ್ವಾಸ ಮತ ನಿರ್ಣಯ ಮಂಡಿಸಬೇಕೆಂದು ತಾವು ನನಗೆ ಕೇಳುತ್ತಿದ್ದೀರಿ. ಯಾವ ರೀತಿಯಾಗಿ ನಾನು ಅದನ್ನು ಮಂಡಿಸಬೇಕು? ಇವತ್ತು ಈ ತರಹ, ವೆಲ್‌ನಲ್ಲಿ ಸದಸ್ಯರು ಕುಳಿತಿರುವಾಗ, House is not in order. ವಿಶ್ವಾಸ ಮತ ಯಾಚನೆ ಮಾಡಬೇಕೆಂದು ತಾವು ಹೇಗೆ ನನ್ನನ್ನು ಕೇಳುತ್ತಿದ್ದೀರಿ? ಇದು ಸಂತೆ ಅಲ್ಲ, ಇದು ಸಂತೆ ಅಲ್ಲ, ಇವತ್ತು ಮಾನ್ಯ ಬಾಳಿಗಾ ಅವರು ಕುಳಿತಂತಹ ಸ್ಥಾನದಲ್ಲಿ ತಾವು ಕುಳಿತಿದ್ದೀರಿ. ಇವತ್ತು ನ್ಯಾಯ ಕೇಳುತ್ತಿದ್ದಾರೆ. ಅವರಿಗೆ ತಾವು ಸ್ಪಷ್ಟೀಕರಣ ಕೊಡಿ. ತಾವು ಸ್ಪಷ್ಟೀಕರಣ ಕೊಟ್ಟಮೇಲೆ ಅವರು ತಮ್ಮ ಸ್ಥಾನಗಳಲ್ಲಿ ಹೋಗಿ ಕುಳಿತುಕೊಳ್ಳುತ್ತಾರೆ. ಆಗ ನನ್ನನ್ನು ಕೇಳಿ, ನಾವೂ ಕೂಡ ಹೇಳುತ್ತೇವೆ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಕೇಳಿ. ಯಾವುದೇ ಸ್ಪಷ್ಟೀಕರಣದ ಅಗತ್ಯ ಇಲ್ಲ. ಈ ಸದನವನ್ನು ಮಾನ್ಯ ರಾಜ್ಯಪಾಲರ ಸೂಚನೆ ಮೇರೆಗೆ ಕರೆಯಲಾಗಿದೆ. ಮಾನ್ಯ ಮುಖ್ಯಮಂತ್ರಿಗಳು ವಿಶ್ವಾಸ ಮತವನ್ನು ಕೇಳಲೇಬೇಕಾಗುತ್ತದೆ. ಅದಕ್ಕೆ ನಾನು ಅವರಲ್ಲಿ ವಿನಂತಿ ಮಾಡುತ್ತೇನೆ. ..... That is his constitutional obligation. ದಯಮಾಡಿ ಅದನ್ನು ಮಾಡಬೇಕು ಎಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ನಾನು ಒಂದು ವಿಚಾರವನ್ನು ಹೇಳುತ್ತೇನೆ. ಜನತಾದಳ (ಜಾತ್ಯಾತೀತ)ದ ನಾಯಕರ್ಯಾರು ಎಂದು ನಾನು ಮಾನ್ಯ ಮಾಡಿದ ತಕ್ಷಣ ನೀವೆಲ್ಲಾ ಇಲ್ಲಿಗೆ ಬಂದಿದ್ದೀರಿ. ಇದಕ್ಕೂ ಅದಕ್ಕೂ ಸಂಬಂಧವೇನು? ಕಾನೂನು ಪ್ರಕಾರ ಮಾನ್ಯ ಮಾಡತಕ್ಕದ್ದು ಅಗತ್ಯ ಇತ್ತು. ಅದನ್ನು ಕಾನೂನು ಪ್ರಕಾರವೇ ನಾನು ಮಾಡಿದ್ದೇನೆ. ಆ obligation ನನ್ನ ಮುಂದೆ ಇತ್ತು. ಅದನ್ನು ನಾನು ಮಾಡಿದ್ದೇನೆ. **ನಾನು ಈಗ ಮಾನ್ಯ ಮುಖ್ಯಮಂತ್ರಿಗಳನ್ನು ವಿಶ್ವಾಸ ಮತ ಕೇಳಿ ಎಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ವಿಶ್ವಾಸ ಮತ ಕೇಳುತ್ತಾರಾ ಎಂದು ದಯಮಾಡಿ ಹೇಳಬೇಕು.....**

(ಗೊಂದಲ)

ಅಧ್ಯಕ್ಷರು : .... ಈಗ ನಾನು ಯಾರ ಮಾತನ್ನೂ ಕೇಳಲು ಸಿದ್ಧನಾಗಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಎದ್ದು ವಿಶ್ವಾಸ ಮತ ಕೇಳಬೇಕು. ವಿಶ್ವಾಸ ಮತವನ್ನು ತಾವು ಕೇಳದೆ ಇದ್ದರೆ, ಈ ವಿಚಾರವನ್ನು ನಾನು ಘನತೆವೆತ್ತ ರಾಜ್ಯಪಾಲರಿಗೆ **report** ಮಾಡುತ್ತೇನೆ ಎಂಬ ಮಾತನ್ನು ಹೇಳಿ, ಅನಿರ್ದಿಷ್ಟ ಕಾಲದವರೆಗೆ ಈ ಸದನವನ್ನು ಮುಂದೂಡುತ್ತಿದ್ದೇನೆ.

(ಸದನವನ್ನು ಅನಿರ್ದಿಷ್ಟ ಅವಧಿಯವರೆಗೆ ರಾತ್ರಿ ೭ ಗಂಟೆ ೧೭ ನಿಮಿಷಗಳಿಗೆ ಮುಂದೂಡಲ್ಪಟ್ಟಿತು).